# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್–119 ಧರ್ಮರಾಯಸ್ವಾಮಿ ದೇವಸ್ಥಾನ, ದಾಸಪ್ಪ ಆಸ್ಪತ್ರೆ ಆವರಣ, ಟೌನ್‌ಹಾಲ್ ಹತ್ತಿರ, ಬೆಂಗಳೂರು**

ಸಂಖ್ಯೆ:ಸ.ಇಂ/ವಾ–119/ವಾರ್ಡ್ ಸಭೆ/2020–21 ದಿನಾಂಕ:20/03/2021

## ವಾರ್ಡ್ –119ರ ವಾರ್ಡ್ ಸಭೆಯ ನಡವಳಿ

ದಿನಾಂಕ:20/03/2021 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–119ರ ವಾರ್ಡ್ ಕಛೇರಿಯಲ್ಲಿ ಶ್ರೀ. ಡಿ.ಕೆ. ಮಧುಸೂದನ್, ಸ.ಕಾ.ನಿ.ಅ (ಜಂಟಿ ನಿರ್ದೇಶಕರು, ಕಟ್ಟಡ ಪರವಾನಗಿ ರವರ ಕಛೇರಿ) ವಾರ್ಡ್119ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು :–**

1. ಶ್ರೀ. ಡಿ.ಕೆ. ಮಧುಸೂದನ್. ನೋಡಲ್ ಅಧಿಕಾರಿ ವಾರ್ಡ್–119
2. ಶ್ರೀ. ಎನ್. ಪ್ರದೀಪ್ ಕುಮಾರ್, ಸಂಚಾಲಕರು ಮತ್ತು ಕಾರ್ಯದರ್ಶಿ ವಾರ್ಡ್–119.
3. ಶ್ರೀ. ಸೀತಾರಾಮಯ್ಯ, ಹಿ.ಆ.ಪ ವಾರ್ಡ್–119.
4. ಶ್ರೀ. ಬಾಬುಕುಮಾರ್, ಕೆಲಸ ಪರಿವೀಕ್ಷಕರು ವಾರ್ಡ್–119.
5. ಶ್ರೀ. ಸಂಪತ್, ಮೀಟರ್ ರೀಡರ್ BWSSB
6. ಶ್ರೀ. ದೊರೈರಾಜು, ಕಂದಾಯ ಇಲಾಖೆ,
7. ಶ್ರೀ. ರಾಜೇಶ್, ಸಹಾಯಕ ಅಭಿಯಂತರರು, ಬೆಸ್ಕಾಂ.

**ಹಾಜರಿದ್ದ ಸ್ಥಳೀಯರು :–**

1. ಶ್ರೀ. ಪರಪ್ಪ.
2. ಶ್ರೀ. ಚಿಕ್ಕ ನಾಗೇಶ್
3. ಶ್ರೀ. ಗೋಪಿ
4. ಶ್ರೀ. ಸುಲೇಮಾನ್

ಮೇಲ್ಕಂಡ ಸಭೆಗೆ ಎಲ್ಲರನ್ನು ಸ್ವಾಗತಿಸಿ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು. ಮಾನ್ಯ ಅಧ್ಯಕ್ಷರು ಈ ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳನ್ನು ಅವಲೋಕಿಸುತ್ತಾ ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳನ್ನು ವಿಚಾರಿಸಲಾಗಿ ಕೈಗೊಂಡ ಕ್ರಮಗಳ ಬಗ್ಗೆ ಸಭೆಗೆ ತಿಳಿಸಲಾಯಿತು.

ಮು.ತಿ.ನೋ..

**ಚರ್ಚಿಸಲಾದ ವಿಷಯಗಳು:-**

1. **ಕಾಮಗಾರಿ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಪರಪ್ಪ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಸಿದ್ದಣ್ಣಿ ಗಲ್ಲಿ 3ನೇ ಅಡ್ಡರಸ್ತೆ, 13ನೇ ಅಡ್ಡರಸ್ತೆ, 12ನೇ ಅಡ್ಡರಸ್ತೆ ಮತ್ತು 14ನೇ ಅಡ್ಡರಸ್ತೆ, ಎ.ಜಿ. ಟೆಂಪಲ್ ಸ್ಟ್ರೀಟ್, ಕುಂಬಾರ ಪೇಟೆ, ಮತ್ತು ಚೋಳಗಲ್ಲಿಗಳಲ್ಲಿ ರಸ್ತೆ ಗುಂಡಿಗಳು ಬಿದ್ದಿರುವುದಾಗಿ ಹಾಗೂ ಚರಂಡಿಯಲ್ಲಿ ಹೂಳು ತುಂಬಿಕೊಂಡಿರುವುದಾಗಿ ತಿಳಿಸಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ವಾರ್ಡಿನ ಅಭಿಯಂತರರು ಉತ್ತರಿಸಿ ಅತಿ ಜರೂರಾಗಿ ಈ ಬಗ್ಗೆ ಕ್ರಮ ವಹಿಸಿ ಸದರಿ ರಸ್ತೆಗಳ ಚರಂಡಿಗಳಲ್ಲಿ ಹೂಳನ್ನು ತೆಗೆಯುವುದಾಗಿ ಹಾಗೂ ರಸ್ತೆಗುಂಡಿಗಳನ್ನು ಮುಚ್ಚುವುದಾಗಿ ಸಭೆಗೆ ತಿಳಿಸಿದರು.

2. **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಪರಪ್ಪ ರವರು ಮಾತನಾಡಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗಕ್ಕೆ ಸಂಬಂಧಪಟ್ಟಂತೆ ಮ್ಯಾನ್‌ಹೋಲ್‌ಗಳಿಂದ ತೆಗೆದು ರಸ್ತೆಯ ಮೇಲೆ ಸುರಿದಿರುವ ಸಿಲ್ಟ್‌ನ್ನು ತೆರವುಗೊಳಿಸುವಂತೆ ಕೋರಿದರು ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ. ಸಂಪತ್ ರವರು ಮಾತನಾಡಿ ಮ್ಯಾನ್‌ಹೋಲ್‌ಗಳಿಂದ ತೆಗೆದು ರಸ್ತೆಯ ಮೇಲೆ ಸುರಿದಿರುವ ಸಿಲ್ಟ್‌ನ್ನು ಕೂಡಲೇ ತೆರವುಗೊಳಿಸಲು ಇಲಾಖೆಯ ಸಂಬಂಧಪಟ್ಟವರಿಗೆ ತಿಳಿಸಿ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

3. **ವಿದ್ಯುತ್ ಇಲಾಖೆ:-**

ವಿದ್ಯುತ್ ಇಲಾಖೆಗೆ ಸಂಬಂಧಪಟ್ಟಂತೆ ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಚಿಕ್ಕನಾಗೇಶ್ ರವರು ಮಾತನಾಡಿ ಎಸ್.ಪಿ. ರಸ್ತೆ, ಬಿ.ಪಿ ರಸ್ತೆ, ಪೇಟೆ ಅಂಗಡಿ ಆರ್.ಪಿ ಲೇನ್, 12ನೇ ಮತ್ತು 13ನೇ ಅಡ್ಡರಸ್ತೆ ಕಲಾಸಿಕಾಳ್ಯ, 5ನೇ ಅಡ್ಡರಸ್ತೆ ಮಾರುಕಟ್ಟೆ ಈ ಪ್ರದೇಶಗಳಲ್ಲಿ ಬೀದಿ ದೀಪ ಉರಿಯುತ್ತಿಲ್ಲವೆಂದು ದೂರಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟವರಿಗೆ ಸೂಕ್ತ ಕ್ರಮ ವಹಿಸಲು ತಿಳಿಸುವುದಾಗಿ ಸಭೆಗೆ ತಿಳಿಸಿದರು.

4. **ಕಂದಾಯ ವಿಭಾಗ:-**

ಕಂದಾಯ ವಿಭಾಗವನ್ನು ಉದ್ದೇಶಿಸಿ ಅಧ್ಯಕ್ಷರು ಮಾತನಾಡಿ ಪ್ರತಿ ವಾರದ ಕಂದಾಯ ವಸೂಲಾತಿ ಬಗ್ಗೆ ವಿವರಗಳನ್ನು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ಹಾಜರುಪಡಿಸುವಂತೆ ಸೂಚಿಸಿದರು. ಹಾಗೂ ಕಳೆದ ವಾರದ ಕಂದಾಯ ವಸೂಲಾತಿ ಬಗ್ಗೆ ವಿಚಾರಿಸಲಾಗಿ ಶ್ರೀ. ದೊರೈರಾಜು ಕಂದಾಯ ಪರಿವೀಕ್ಷಕರು ಉತ್ತರಿಸಿ ಕಳೆದ ವಾರದಲ್ಲಿ ರೂ. 16,81,574/- ಗಳಷ್ಟು ಹಾಗೂ ಈ ವಾರದಲ್ಲಿ ರೂ. 75,16,771/- ಗಳಷ್ಟು ಕಂದಾಯ ವಸೂಲಾತಿಯಾಗಿರುವುದಾಗಿ ತಿಳಿಸಿದರು.

ಮು.ತಿ.ನೋ..

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಚಿಕ್ಕನಾಗೇಶ್ ರವರು ಮಾತನಾಡಿ ಕಂದಾಯ ಕಛೇರಿಗೆ ಮಾಹಿತಿ ಹಕ್ಕು ಅಧಿನಿಯದಲ್ಲಿ ಕೋರಿರುವ ಮಾಹಿತಿಯನ್ನು ನಿಗಧಿತ ಸಮಯದಲ್ಲಿ ಒದಗಿಸುತ್ತಿಲ್ಲವೆಂದು ದೂರಿದರು. ಈ ಬಗ್ಗೆ ಅಧ್ಯಕ್ಷರು ಸಂಬಂಧಪಟ್ಟವರಿಗೆ ಸೂಚನೆ ನೀಡಿರುತ್ತಾರೆ.

5. **ಸಂಚಾರಿ ಪೊಲೀಸ್ ವಿಭಾಗ:-**

ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸುಲೇಮಾನ್ ರವರು ಮಾತನಾಡಿ ಕೆ.ಎಸ್. ಲೇನ್ ಮತ್ತು ಎಸ್.ಪಿ ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಿದ್ದು, ಹೆಚ್ಚಿನ ಟ್ರಾಫಿಕ್ ಇರುವುದಾಗಿ ಹಾಗೂ ಅನಧಿಕೃತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸಬೇಕಾಗಿ ದೂರಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟವರಿಗೆ ಸೂಕ್ತ ಕ್ರಮ ವಹಿಸಲು ತಿಳಿಸುವುದಾಗಿ ಸಭೆಗೆ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಹಾಜರಿದ್ದ ಸ್ಥಳೀಯರಿಗೆ ನಮ್ಮ ಪಾಲಿಕೆ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಗೈರುಹಾಜರಾದ ಅಧಿಕಾರಿಗಳಿಗೆ ಎಚ್ಚರಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಿ, ತಪ್ಪಿದ್ದಲ್ಲಿ ಸಂಬಂಧಪ್ಪ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಎಚ್ಚರಿಸಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸ್ಥಳೀಯರಿಗೆ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರದೀಪ್‌ಕುಮಾರ್ ಎಸ್)
ಕಾರ್ಯದರ್ಶಿ
ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ

(ಡಿ.ಕೆ. ಮಧುಸೂದನ್)
ನೋಡಲ್ ಅಧಿಕಾರಿ
ವಾರ್ಡ್-119 ಧರ್ಮರಾಯಸ್ವಾಮಿ ದೇವಸ್ಥಾನ